

ಚಿತ್ರ: ಕೆ.ಎಸ್. ನಾಗೇಶ್‌ಕುಮಾರ್

# ರಮೇಶ್ ಬಹುಪಾತ್ರಾಭಿನಯ!

**ನಟ, ನಿರೂಪಕ, ನಿರ್ದೇಶಕ, ನಿರ್ಮಾಪಕ ಹೀಗೆ ಹಲವು ಕ್ಷೇತ್ರಗಳಲ್ಲಿ ರಮೇಶ್ ಅರವಿಂದ್ ತಮ್ಮ ನಗುಮುಖದ ಛಾಪು ಒತ್ತಿದವರು. ಈಗ ಆ ಎಲ್ಲ ಪಾತ್ರಗಳನ್ನೂ ಅವರು ಒಟ್ಟೊಟ್ಟಿಗೇ ನಿರ್ವಹಿಸುತ್ತಿರುವುದು ವಿಶೇಷ.**

■ ಪದ್ಮನಾಭ ಭಟ್

◆ 'ಶಿವಾಜಿ ಸುರತ್ಕಲ್' ಸಿನಿಮಾದ ಬಗ್ಗೆ ಹೇಳಿ.

'ಶಿವಾಜಿ ಸುರತ್ಕಲ್' ಸಿನಿಮಾ ಚಿತ್ರೀಕರಣ ಮುಗಿದಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸ ಶುರುವಾಗಬೇಕಿದೆ. ಕನ್ನಡದಲ್ಲಿ ಬಹುಶಃ ಇಂಥ ಸಿನಿಮಾಗಳು ಬಂದಿಲ್ಲ ಅನಿಸತ್ತೆ. ಇಂಗ್ಲಿಷ್‌ನಲ್ಲಿ 'ಷೆರ್ಲಾಕ್ ಹೋಮ್ಸ್' ಸರಣಿ ಬರ್ತಿತ್ತಲ್ಲ. ಸ್ವಲ್ಪ ಆ ರೀತಿಯ ಸಿನಿಮಾ ಇದು. ಷೆರ್ಲಾಕ್ ಹೋಮ್ಸ್ ಪ್ಲಸ್ ಪಾಯಿಂಟ್ ಏನಂದ್ರೆ ಅವನು ಮಿಂಚಿನ ಥರ ಯೋಚನೆ ಮಾಡ್ತಾನೆ. ಪಟಪಟಪಟ ಅಂತ ಮಾತಾಡ್ತಾನೆ. ಆ ಲಕ್ಷಣಗಳೆಲ್ಲ ಈ ಚಿತ್ರದ ನಾಯಕನಿಗೂ ಇವೆ. ಆದರೆ ಇವನು ವೈಯಕ್ತಿಕ ಜೀವನದಲ್ಲಿ ಸಾಕಷ್ಟು ದುರಂತಗಳನ್ನು ಕಂಡವನು. ನೋವು ತೊಂದರೆಗಳನ್ನು ಉಂಡವನು. ನನಗೆ ಈ ಪಾತ್ರ ತುಂಬ ಖುಷಿಕೊಡ್ತು. ನಾನು ಬರೀ ನಟನೆಯ ಬಗ್ಗಷ್ಟೇ ಗಮನ ಕೇಂದ್ರೀಕರಿಸಿ ಮಾಡಿದ ಸಿನಿಮಾ ಇದು.

ಇದನ್ನು ಆಕಾಶ್ ಶ್ರೀವಾತ್ಸವ್ ಎನ್ನುವವರು ನಿರ್ದೇಶನ ಮಾಡುತ್ತಿದ್ದಾರೆ. ಸುಮಾರು ಹದಿಮೂರು ಜನ ಹೊಸಬರು ಈ ಸಿನಿಮಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಯುವ ಪ್ರತಿಭಾವಂತರ ತಂಡ, ಅವರ ಉತ್ಸಾಹ ನನಗೆ ಸಾಕಷ್ಟು ಖುಷಿ ಕೊಟ್ಟಿತು.

◆ '100' ಎನ್ನುವ ಸಿನಿಮಾವನ್ನು ನೀವೇ ನಿರ್ದೇಶಿಸಿ ನಾಯಕನಾಗಿಯೂ ನಟಿಸುತ್ತಿದ್ದೀರಾ. ಇದರ ಹೆಸರೇ ವಿಚಿತ್ರವಾಗಿದೆಯಲ್ಲ...

'100' ಎನ್ನುವುದು ಪೊಲೀಸ್ ಎಮರ್ಜೆನ್ಸಿ ನಂಬರ್. ನಾನು ಈ ಸಿನಿಮಾದಲ್ಲಿ ಒಬ್ಬ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಪಿಕ್‌ಪಾಕೆಟ್ ಮಾಡುವವರನ್ನು ಹಿಡಿಯುವುದು, ಮರ್ಡರ್ ಮಾಡುವವರನ್ನು ಹಿಡಿಯುವ ಪೊಲೀಸ್ ಅಲ್ಲ ಅವನು. ಅಂತರ್ಜಾಲದ ಮೂಲಕ ಕಳ್ಳತನ ಮಾಡುವವರು, ಅಂತರ್ಜಾಲದಲ್ಲಿ ಹೆಣ್ಣುಮಕ್ಕಳಿಗೆ ತೊಂದರೆ ಕೊಡುವವರನ್ನು ಹಿಡಿಯುವ ಪೊಲೀಸ್ ಅಧಿಕಾರಿ. ಸೈಬರ್ ಕ್ರೈಮ್ ಅನ್ನು ಆಧರಿಸಿದ ಸಿನಿಮಾ ಇದು.

ಇಂದಿನ ಕಾಲ – ಸೋಷಿಯಲ್ ಮೀಡಿಯಾಗಳಿಂದ ಆಗುವ ಅನಾಹುತಗಳನ್ನು ಹೇಳುವ ಸಿನಿಮಾ ಇದು. ಸೋಷಿಯಲ್ ಮೀಡಿಯಾದಲ್ಲಿ ಒಬ್ಬರನ್ನು ಫ್ರೆಂಡ್ ಮಾಡಿಕೊಳ್ಳುವುದು ತುಂಬ ಸುಲಭ. ಆದರೆ ಅನ್‌ಫ್ರೆಂಡ್ ಮಾಡುವುದು ಬಹಳ ಹಿಂಸೆ. ಹೀಗೆ ಸೈಬರ್ ಕ್ರೈಮ್ ಸುತ್ತಲೇ ಹೆಣೆದಿರುವ ಸಿನಿಮಾ ಇದು.

◆ ಇದು ಸ್ವಮೇಕ್ ಸಿನಿಮಾನಾ?

ಈ ಕಥೆ ಸುಸಿ ಗಣೇಶನ್ ಎಂಬ ತಮಿಳು ನಿರ್ದೇಶಕರದ್ದು. ಅವರಿಂದ ಹಕ್ಕುಗಳನ್ನು ತೆಗೆದುಕೊಂಡಿದ್ದೇನೆ. ಮೂಲ ಸಿನಿಮಾಗಿಂತ ಪೂರ್ತಿಯಾಗಿ ಬೇರೆ ರೀತಿಯ ಸಿನಿಮಾ ಮಾಡುತ್ತಿದ್ದೇವೆ. ಮೂಲ ಸಿನಿಮಾದಲ್ಲಿ ಇಲ್ಲದ ಕೆಲವು ಪಾತ್ರಗಳನ್ನು ಇಲ್ಲಿ ರೂಪಿಸಿ ಇಟ್ಟುಕೊಂಡಿದ್ದೇವೆ. ರಚಿತಾರಾಮ್ ನಿರ್ವಹಿಸುತ್ತಿರುವ ಪಾತ್ರ ಮೂಲಕಥೆಯಲ್ಲಿ ಇಲ್ಲ. ಅದನ್ನು ನನ್ನ ಅಗತ್ಯಕ್ಕೆ ಅನುಗುಣವಾಗಿ ಸೇರಿಸಿಕೊಂಡಿದ್ದೇನೆ. ಅದರಲ್ಲಿನ ಸೈಬರ್ ಕ್ರೈಮ್ ಎಳೆಯನ್ನಷ್ಟೇ ತೆಗೆದುಕೊಂಡು ನನ್ನ ಶೈಲಿಗೆ ಮ್ಯಾಚ್ ಆಗುವ ಥರ, ನಮ್ಮ ಕನ್ನಡಕ್ಕೆ ಮ್ಯಾಚ್ ಆಗುವ ಥರ ಬದಲಾಯಿಸಿಕೊಂಡಿದ್ದೇವೆ. ಇದು ರೀಮೇಕ್ ಅಲ್ಲ; ರೀಕ್ರಿಯೇಟ್. ಮರುಸೃಷ್ಟಿ ಇದು. ರಮೇಶ್ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸತ್ಯ ಹೆಗಡೆ ಛಾಯಾಗ್ರಹಣ ಮಾಡುತ್ತಿದ್ದಾರೆ. ರವಿ ಬಸ್ರೂರ್ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ.

◆ ನೀವು ಕಾಮಿಡಿ ಜಾನರ್ ಸಿನಿಮಾಗಳನ್ನು ನಿರ್ದೇಶಿಸಿ ಯಶಸ್ಸನ್ನು ಕಂಡವರು. ಈಗ ಆ ಜಾನರ್ ಬಿಟ್ಟು ಬೇರೆ ಥರದ ಸಿನಿಮಾಗಳನ್ನು